# ಶತಮಾನ ಕಂಡ ಪುರಾಣ ಪೀಠ

ಹಿಂದಿನ ಕಾಲದಲ್ಲಿ ಗೋಕರ್ಣದಿಂದ ಪುರೋಹಿತರು ಪುರಾಣ ವಾಚಿಸಲು ಹಳ್ಳಿಗಳಿಗೆ ಮನೆ ಮನೆಗೆ ಹೋಗುವ ರೂಢಿಯಲ್ಲಿತ್ತು. ಪ್ರತಿ ಮನೆಯಲ್ಲಿ ರಾತ್ರಿ ಉಳಿದು ಮನೆಯ ಮಂದಿಗೆಲ್ಲ ಸಂಸ್ಕೃತದಲ್ಲಿರುವ ಪುರಾಣ ವಾಚಿಸುತ್ತಾ ಅರ್ಥವನ್ನು ವಿಸ್ತಾರವಾಗಿ ಹೇಳಿ ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಅವರದೇ ಆದ ಕೊಡುಗೆ ನೀಡುತ್ತಿದ್ದರು.

ಅವರು ಬಂದಾಗ ಕುಳಿತು ಪುರಾಣ ವಾಚಿಸಲೆಂದೇ ಈ ಪುರಾಣ ಪೀಠಗಳು ಇರುತ್ತಿದ್ದವು. ಅಂದು ಅವಿಭಕ್ತ ಕುಟುಂಬಗಳೇ ಆಗಿದ್ದು ಮಕ್ಕಳಿಂದ ಹಿಡಿದು ಮುದುಕರವರೆಗೂ ರಾಗ ಸಹಿತ ಪುರಾಣ ಪೀಠಗಳು ಇರುತ್ತಿದ್ದವು. ಈ ಪುರಾಣ ಪೀಠವು ವಜ್ರಳ್ಳಿ ಸಾಂಬೆಕುಂಬ್ರಿಯ ದತ್ತ ಗಾಂವ್ಕರರ ಮನೆಯಲ್ಲಿ ಕಂಡು ಬಂತು. ಇಂದು ಪುರಾಣ ಓದುವವರೂ ಇಲ್ಲ, ಕೇಳುವವರೂ ಇಲ್ಲ. ಹಳ್ಳಿಗಳು ಬರಿದಾಗಹತ್ತಿವೆ.

ಗಣಪತಿ ಕಂಚಿಪಾಲ ತೇಲಂಗಾರ, ಯಲ್ಲಾಪುರ





# ಇದು ಶಿಕಾರಿಕಲ್ಲು

ವೀರಗಲ್ಲು, ಮಾಸ್ತಿಕಲ್ಲು (ಮಹಾಸತಿ ಕಲ್ಲು) ಇವುಗಳನ್ನು ನೋಡಿದ್ದೇವೆ. ಇವುಗಳನ್ನು ಹೊರತುಪಡಿಸಿ ನೋಡುವುದಾದರೆ, ಈ ಚಿತ್ರದಲ್ಲಿ ಕಾಣುವುದು ಶಿಕಾರಿಕಲ್ಲು. ಎರಡಡಿ ಎತ್ತರದ ಕಲ್ಲಿನ ಮೇಲರ್ಧದಲ್ಲಿ ಇಬ್ಬರು ವ್ಯಕ್ತಿಗಳು ತಮ್ಮ ಭುಜಗಳ ಆಸರೆಯಿಂದ ಒಬ್ಬ ವ್ಯಕ್ತಿಯನ್ನು ಸಾಗಿಸುತ್ತಿರುವ ದೃಶ್ಯ. ಕೆಳ ಅರ್ಧದಲ್ಲಿ ಇಬ್ಬರು ಬಿಲ್ಲುಗಾರರಿದ್ದು, ಆಕ್ರಮಣ ಮಾಡುತ್ತಿರುವ ಮೃಗವನ್ನು ಬಾಣಗಳಿಂದ ಬೇಟೆಯಾಡಿರುವ ದೃಶ್ಯ ಕಾಣುತ್ತದೆ. ಚಿಕ್ಕಮಗಳೂರು ತಾಲ್ಲೂಕಿನ ಮುತ್ತೋಡಿಯ ಸತೀಶ್ ತಮ್ಮ ಜಮೀನನ್ನು ಅಚ್ಚುಕಟ್ಟು ಮಾಡುವ ಸಮಯದಲ್ಲಿ ಇದು ದೊರೆತಿದೆ. ಇದನ್ನು ಮರಕ್ಕೆ ಆನಿಸಿ ಸಂರಕ್ಷಿಸಿದ್ದಾರೆ.

—ಕೆ.ಎನ್. ಪ್ರಭಾಕರ ಗುಪ್ತ, ಹಾಸನ

# ಉಪ್ಪು ಸಂಗ್ರಹಕ ಟ್ಯಾಂಕ್

ಉಪ್ಪನ್ನು ಸಂಗ್ರಹಿಸಿಡಲು ಹಿಂದಿನ ಕಾಲದಲ್ಲಿ ಬಳಸುತ್ತಿದ್ದ ಪಾತ್ರೆ ಇದು. ತಾಳೆ ಮರದ ಕಾಂಡದಿಂದ ತಯಾರಿಸಿದ ಈ ಪಾತ್ರೆಯಲ್ಲಿ ಒಮ್ಮೆಗೆ ಸುಮಾರು ಒಂದೂವರೆ ಕ್ವಿಂಟಾಲ್‌ನಿಂದ ಎರಡು ಕ್ವಿಂಟಾಲ್‌ನಷ್ಟು ಉಪ್ಪನ್ನು ಸಂಗ್ರಹಿಸಿಡಬಹುದು. ಬೇರೆ ಯಾವುದೇ ಪಾತ್ರೆಯಲ್ಲಿ ಉಪ್ಪನ್ನು ಸಂಗ್ರಹಿಸಿಟ್ಟರೆ ಕರಗುವುದು ಸಹಜ. ಆದರೆ, ಇದರಲ್ಲಿ ಉಪ್ಪನ್ನು ಇಟ್ಟರೆ ಕರಗದಂತೆ ರಕ್ಷಿಸಬಹುದು. ತುಳು ಭಾಷೆಯಲ್ಲಿ 'ಮರಾಯಿ' ಎಂದು ಕರೆಸಿಕೊಳ್ಳುವ ಈ ಪಾತ್ರೆ ಸುಮಾರು ಮೂವ್ವತ್ತೈದು ವರ್ಷ ಹಳೆಯದಾದುದು. ಇದು ಕಂಡು ಬಂದದ್ದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪಾಂಡವರಕಲ್ಲಿನ ನಾರಾಯಣ ಭಟ್‌ರವರ ಗಿರಣಿ ಅಂಗಡಿಯಲ್ಲಿ.

—ನವ್ಯ ಅಯ್ಯನಕಟ್ಟೆ, ಉಜಿರೆ

